ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಪಿ. ಡಬ್ಲ್ಯೂ. ಡಿ ಮೂಲಕ ಕೈಗೊಳ್ಳುವ ಆದ್ಯತಾ ಕಾಮಗಾರಿಗಳ ಕುರಿತು

ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು) –

1139 (1230) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪಿ. ಡಬ್ಲ್ಯೂ. ಡಿ ಇಲಾಖೆಯ ಮೂಲಕ ಕೈಗೊಳ್ಳುವ ಆದ್ಯತಾ ಕಾಮಗಾರಿಗಳು ಯಾವುವು; ಈ ಆದ್ಯತಾ ಕಾಮಗಾರಿಗಳನ್ನು ಯಾವ ಆಧಾರದಲ್ಲಿ ನಿರ್ಧರಿಸಲಾಗುತ್ತದೆ; ಆದ್ಯತಾ ಕಾಮಗಾರಿಗಳನ್ನು ಗುರುತಿಸಲು ಸರ್ಕಾರವು ಯಾವ ರೀತಿಯ ನಿಯಮಾವಳಿಗಳನ್ನು, ಮಾರ್ಗಸೂಚಿಗಳನ್ನು ಹೊರಡಿಸಿದೆ; (ಸದರಿ ನಿಯಮಾವಳಿ, ಮಾರ್ಗಸೂಚಿ, ಆದೇಶದ ಪ್ರತಿಯನ್ನು ಒದಗಿಸುವುದು)

(ಆ) ಹಾಸನ ಜಿಲ್ಲೆಯಲ್ಲಿ ಕಳೆದ ಆರು ವರ್ಷಗಳಲ್ಲಿ ಪಿ. ಡಬ್ಲ್ಯೂ. ಡಿ ಇಲಾಖೆಯ ಮೂಲಕ ಕೈಗೊಂಡ ಆದ್ಯತಾ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿರುವ ಗುತ್ತಿಗೆದಾರರ ವಿವರ ಒದಗಿಸುವುದು? (ಸದರಿ ಆದ್ಯತಾ ಕಾಮಗಾರಿಗಳಿಗೆ ನಿಗದಿಪಡಿಸಿದ ಮೊತ್ತ, ಕಾಮಗಾರಿ ಪೂರ್ಣಗೊಂಡಾಗ ಆದ ವೆಚ್ಚ, ಆದ್ಯತಾ ಕಾಮಗಾರಿ ಪೂರ್ಣಗೊಂಡ ದಿನಾಂಕ, ಸದರಿ ಕಾಮಗಾರಿಗೆ ಅಂತಿಮ ಬಿಲ್ಲು ಪಾವತಿಸಿದ ದಿನಾಂಕದೊಂದಿಗೆ ವಿವರ ನೀಡುವುದು)